**02ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ, ನ್ಯಾಯಾಲಯ ,**

**ಚನ್ನಗಿರಿ .**

**ಅಸಲು ದಾವಾ ಸಂಖ್ಯೆಃ 25/2024**

**ಹೆಸರುಃ ಮಾರುತಿ**

**ತಂದೆಯ ಹೆಸರುಃ ಹಾಲನಾಯ್ಕ** **ಪಿ.ಡಬ್ಲ್ಯೂಃ 2**

**ವಯಸ್ಸುಃ 32 ವರ್ಷ**

**ಉದ್ಯೋಗಃ ಸರ್ಕಾರಿ ಸರ್ವೆಯರ್, ದಾವಣಗೆರೆ**

**ವಾಸಸ್ಥಳಃ ದಾವಣಗೆರೆ**

**ಸಾಕ್ಷಿಗೆ ದಿನಾಂಕಃ 31-01-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಜಿ ಆರ್ ವಕೀಲರಿಂದಃ**

ನಾನು 2013 ರಿಂದ ಇಲ್ಲಿಯವರೆಗೆ ಸರ್ಕಾರಿ ಭೂಮಾಪಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆನೆ.

ಭೂ ಮಾಪನ ಇಲಾಖೆಗೆ ಹದ್ದುಬಸ್ತು , ಪೋಡಿ, 11ಇ, ಸಿ ಸಿ ಡಬ್ಲ್ಯೂ, ರಂತಹ ಇತರೆ ಅರ್ಜಿಗಳು ಭೂಮಾಪನಕ್ಕಾಗಿ ಬರುತ್ತದೆ.

ನಲ್ಲೂರು ಗ್ರಾಮದಸ ರ್ವೆ ನಂ 121/2 ರಲ್ಲಿನ ಜಮೀನಿನ ಅಳತೆಗಾಗಿ ಹದ್ದುಬಸ್ತು ಅರ್ಜಿ ಬಂದಿದ್ದು ಅದರಂತೆ ದಿಃ 09-11-2022 ರಂತೆ ಅಳತೆ ಕಾರ್ಯ ಮಾಡಿರುತ್ತೇನೆ. ಅಳತೆ ಕಾರ್ಯಕ್ಕೂ ಮುನ್ನ ಅರ್ಜಿದಾರರು ಕೊಟ್ಟ ಆಜುಬಾಜುದಾರರಿಗೆ ಹದ್ದುಬಸ್ತು ನೋಟಿಸನ್ನು ಜಾರಿ ಮಾಡಿರುತ್ತೇನೆ. ಸದರಿ ನೋಟಿಸನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಕಡತದಲ್ಲಿನ ಸದರಿ ನೋಟಿಸನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು ಅದರಲ್ಲಿನ 1 ಮತ್ತು 2 ನೇ ಪುಟದಲ್ಲಿನ ಸಾಕ್ಷಿಯ ಸಹಿಯನ್ನು ಒಟ್ಟಾಗಿ ನಿಪಿ-2(ಎ) ಎಂದು ಗುರುತಿಸಲಾಯಿತು. ಸದರಿ ಸರ್ವೆ ಕಾರ್ಯ ನಿರ್ವಹಿಸುವ ಸಮಯಕ್ಕೆನಾನು ಸದರಿ ಸರ್ವೆ ನಂಬರಿನ ಮೂಲ ಟಿಪ್ಪಣಿ, ಹಿಸ್ಸಾ ಟಿಪ್ಪಣಿ ಮತ್ತು ಅಟ್ಲಾಸ್

ದಾಖಲೆಗಳನ್ನು ತೆಗೆದುಕೊಂಡು ಹೋಗಿರುತ್ತೇನೆ. ಸದರಿ ದಿನಾಂಕದಂದು ನಾನು ಸರ್ವೆ ನಂ 121/1, 121/2, 121/3 ರ ಜಮೀನುಗಳನ್ನು ಅಳತೆ ಮಾಡಿ ಗಡಿ ಗುರುತಿಸಿಕೊಂಡು 121/2 ರ ಹದ್ದುಬಸ್ತು ಕಾರ್ಯವನ್ನು ಮಾಡಿರುತ್ತೇನೆ. ಸದರಿ ಅಳತೆ ಮಾಡುವ ಸಮಯಕ್ಕೆ ಸದರಿ ಸರ್ವೆ ನಂಬರಿನಲ್ಲಿನ ಉತ್ತರ ದಿಕ್ಕಿನ ಲಾಗು ಹಿಸ್ಸಾ ನಂ 1 ರ ಹಿಡುವಳಿದಾರರು 1ವರೆ ಗುಂಟೆ ಜಮೀನನ್ನು ಒತ್ತುವರಿ ಮಾಡಿರುವುದು ಕಂಡುಬಂದಿರುತ್ತದೆ. ನಂತರ ಸದರಿ ಸರ್ವೆ ನಂಬರಿನ ಗಡಿಗಳನ್ನು ಗುರುತಿಸಿಕೊಂಡು ಬಾಂಡ್ ಗಲ್ಲುಗಳನ್ನು ಹಾಕಿಸಿರುತ್ತೇನೆ. ತದನಂತರ ನಾನು ಸ್ಥಳದಲ್ಲಿ ಕಚ್ಚಾ ನಕ್ಷೆಯನ್ನು ತಯಾರಿಸಿರುತ್ತೇನೆ. ನಂತರ ಮಹಜರನ್ನು ತಯಾರಿಸಿರುತ್ತೇನೆ.
ಸಾಕ್ಷಿ ಕಡತದಲ್ಲಿನ ಸದರಿ ನಕ್ಷೆ ಮತ್ತು ಮಹಜರನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ-3 ಮತ್ತು 4 ಎಂದು ಗುರುತಿಸಲಾಗಿದ್ದು ಅದರಲ್ಲಿನ ಸಾಕ್ಷಿಯ ಸಹಿಯನ್ನು ಒಟ್ಟಾಗಿ ನಿಪಿ-3(ಎ) ಮತ್ತು 4(ಎ) ಎಂದು ಗುರುತಿಸಲಾಯಿತು.

ನಿಪಿ-3 ರಲ್ಲಿ ಒತ್ತುವರಿಯಾದ ಸ್ಥಳವನ್ನು ಬಣ್ಣದಿಂದ ಗುರುತಿಸಿರುತ್ತೇನೆ. ಸದರಿ ಮಹಜರಿಗೆ ಅರ್ಜಿದಾರರು ಮತ್ತು ಹಾಜರಿದ್ದ ಗ್ರಾಮಸ್ಥರು ಸಹಿ ಮಾಡಿರುತ್ತಾರೆ. ಬಾಜುದಾರರ ಪೈಕಿ ಒಬ್ಬರು ಸಹಿ ಮಾಡಿದ್ದು ಉಳಿದ ಬಾಜುದಾರರು ಸಹಿ ಮಾಡಲು ನಿರಾಕರಿಸಿರುತ್ತಾರೆ.

(ಪ್ರತಿವಾದಿಗಳು ಮತ್ತು ಪ್ರತಿವಾದಿ ಪರ ವಕೀಲರು ಗೈರು ಹಾಜರಾದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆಎಂಎಫ್ ಸಿ, ಚನ್ನಗಿರಿ.**